
ನಾಂದಿಪದ

# ಮಾತಿನ ಜೀವಶಕ್ತಿಯ ಹಂಬಲದಲ್ಲಿ



ಕಲೆ: ಜಮೀವುಲ್ಲಾ ಎಂ. ಅಸದ್

**ವಿವಿಧ** ದೇಶ-ಭಾಷೆಗಳ ಸಾಂಸ್ಕೃತಿಕ ವ್ಯಕ್ತಿತ್ವಗಳನ್ನು ಕನ್ನಡದ ಓದುಗರಿಗೆ ಮುಖಾಮುಖಿಯಾಗಿಸುವಲ್ಲಿ ಸದಾ ಮುಂದಿರುವ 'ಮಯೂರ' ಈ ಸಂಚಿಕೆಯಲ್ಲಿ ಮೂರು ವಿಶಿಷ್ಟ ಸಂದರ್ಶನಗಳನ್ನು ಒಳಗೊಂಡಿದೆ. ಬದುಕಿನ ಬಗ್ಗೆ ಪ್ರೀತಿ ಮತ್ತು ಕುತೂಹಲ ಹೆಚ್ಚಿಸುವಂತಹ ಈ ಮೂರು ಮಾತುಕತೆಗಳು ಓದುಗರಿಗೆ ಇಷ್ಟವಾಗಬಲ್ಲವು, ಕಾಡಬಲ್ಲವು.

'ಭಾಷೆಯ ಬಳಕೆ ಎಲ್ಲಿ ಸರಿ ಇರುವುದಿಲ್ಲವೋ ಅಲ್ಲಿ ಪ್ರೀತಿ ಮತ್ತು ಸಂವಹನ ಸಾಧ್ಯವಿಲ್ಲ' ಎನ್ನುವುದು ಮಲಯಾಳಂ ಲೇಖಕ ಶಿಹಾಬುದ್ದೀನ್ ಪೊಯ್ತುಂಕಡವು ಅವರ ಮಾತು. 'ಭಾಷೆಯೆನ್ನುವುದು ಆಳವಾಗಿಯೂ ಮಾಂತ್ರಿಕವಾಗಿಯೂ ಶಕ್ತಿಯುತವಾಗಿಯೂ ಕಾಣಿಸುತ್ತದೆ. ಭಾಷೆಯೇ ಮನುಷ್ಯನ ಅತ್ಯಂತ ದೊಡ್ಡ ಅನ್ವೇಷಣೆ' ಎನ್ನುವುದು ಭಾರತೀಯ ಇಂಗ್ಲಿಷ್ ಲೇಖಕ ಜೆರ್ರಿ ಪಿಂಟೊ ಅವರ ಉದ್ಗಾರ. ಭಾಷೆಯ ಮಹತ್ವವನ್ನು ಸೂಚಿಸುವಂತಿರುವ ಈ ಹೇಳಿಕೆಗಳು ಭಾಷೆಯ ವಿಸ್ತರಣೆಯಾದ ಮಾತಿಗೂ ಅನ್ವಯಿಸುವಂತಹವು. ಮಾತನ್ನು ಜ್ಯೋತಿರ್ಲಿಂಗದ ರೂಪದಲ್ಲಿ ಕಂಡ ಪರಂಪರೆ ನಮ್ಮದು. ಈಗಿನದು ಮಾತು ಸುಡುವ ಕೆಂಡದಂತಾಗಿರುವ ಕಾಲಘಟ್ಟ. ಇಂಥ ಸಂದರ್ಭದಲ್ಲಿ ಭಾಷೆಯ ವಿವೇಕ ಮತ್ತು ಜೀವಶಕ್ತಿಯನ್ನು ಕಾಣಿಸುವ ಮಾತುಗಳನ್ನು ಮತ್ತೆ ಮತ್ತೆ ಆಡಬೇಕಾಗಿದೆ, ಪ್ರಜ್ಞಾಪೂರ್ವಕವಾಗಿ ಆಡಬೇಕಾಗಿದೆ. ಅಂಥ ಮಾತುಗಳನ್ನೊಳಗೊಂಡ ಮೂರು ವಿಶಿಷ್ಟ ಸಂದರ್ಶನಗಳು ಈ ಸಂಚಿಕೆಯಲ್ಲಿವೆ. ಈ ಸಂದರ್ಶನಗಳು ಮಾತನಾಡಿರುವವರ ವ್ಯಕ್ತಿತ್ವದ ಚೆಲುವನ್ನು ಸೂಸುವಂತೆ, ಆ ಮಾತಿಗೆ ಮನಗೊಡುವವರನ್ನೂ ಬೆಳಗುವಂತಿವೆ. ಶಿಹಾಬುದ್ದೀನ್ ಹಾಗೂ ಪಿಂಟೊ ಅವರ ಸಂದರ್ಶನಗಳು, ಸಾಹಿತ್ಯದ ವಿದ್ಯಾರ್ಥಿಗಳು ಯೋಚಿಸಬೇಕಾದ ಹಾಗೂ ರೂಢಿಸಿಕೊಳ್ಳಬೇಕಾದ ಬರವಣಿಗೆಯ ಸೂಕ್ಷ್ಮಗಳ ಕುರಿತು ಗಮನಸೆಳೆಯುತ್ತವೆ. ಕಥಕಳಿಯ ಹಿರಿಯ ಜೀವ ಕಲಾಮಂಡಲಂ ಗೋಪಿ ಆಶಾನ್ ಅವರೊಂದಿಗಿನ ಮಾತುಕತೆ, ಬದುಕಿನ ಚೆಲುವು ಮತ್ತು ಘನತೆಯೇ ಕಲೆಯಾಗಿ ರೂಪುಗೊಂಡ ಅಪೂರ್ವ ಉದಾಹರಣೆಯನ್ನು ಸಹೃದಯರಿಗೆ ಕಾಣಿಸುವಂತಹದ್ದು. ಕುವೆಂಪು ಸಾಹಿತ್ಯದಲ್ಲಿನ ಹೊಸ ಪದಪ್ರಯೋಗಗಳ ಕುರಿತು ಬೇಂದ್ರೆ ಕೃಷ್ಣಪ್ಪನವರು ಬರೆದಿರುವ ಪುಟ್ಟ ಪುಟ್ಟ ಟಿಪ್ಪಣಿಗಳೂ ಭಾಷೆಯ ಬಗೆಗಿನ ಪ್ರೀತಿಯನ್ನು ಹೆಚ್ಚಿಸುವಂತಿವೆ.

'ಮಯೂರ'ದ ಆಗಸ್ಟ್ ಸಂಚಿಕೆಯಲ್ಲಿನ ಕಾವ್ಯಗುಚ್ಛ ಓದುಗರ ಗಮನಸೆಳೆದಿದೆ. ಮುಖಪುಟವನ್ನೇ ಒಂದು ಕಾವ್ಯವನ್ನಾಗಿ ಆನಂದಿಸಿದವರೂ ಇದ್ದಾರೆ. ಈ ಸಂಚಿಕೆಯಲ್ಲಿಯೂ ಕವಿತೆ ಮತ್ತು ಕಥೆಗಳ ಕಟ್ಟು ಎಂದಿನಂತೆ ಆದ್ಯತೆ ಪಡೆದಿದೆ.



**ಮಯೂರ ಬಳಗ**
editormy@mayura.co.in